ಕಿರಿಕಿರಿಯಾಗುವಂತಿರಲಿಲ್ಲ. ಅವನು ನನ್ನ ಕುರಿತು ಮತ್ತು ನನ್ನ ಯೋಜನೆಗಳ ಬಗ್ಗೆ ಬಹಳ ಪ್ರಶ್ನೆಗಳನ್ನು ಕೇಳಿದ. ಆದರೆ, ಆ ಸಮಯದಲ್ಲಿನ ನನ್ನ ಉದ್ಯೋಗದ ಬಗ್ಗೆ ನಾನು ಎಚ್ಚರ ವಹಿಸಬೇಕಾಗಿತ್ತು; ನಾನು ಬಹಳ ಪ್ರಾಮಾಣಿಕನಂತೆ ತೋರ್ಪಡಿಸಿಕೊಳ್ಳುತ್ತಾ ಬೇರೆ ಏನನ್ನೋ ಹೇಳಿದೆ. ನಾನೊಬ್ಬ ಪತ್ರಕರ್ತನೆಂದು ಹೇಳಿದೆ. ಅವನು ಕಾದಂಬರಿ ಬರೆಯುತ್ತೀಯಾ ಎಂದು ಕೇಳಿದ. ನಾನು, ಬಿಡುವಿನ ಸಮಯದಲ್ಲಿ ಬರೆಯುತ್ತೇನೆಂದು ಒಪ್ಪಿಕೊಂಡೆ. ಆಗ ಅವನು ರಷ್ಯಾದ ಕಾದಂಬರಿಕಾರರ ಬಗ್ಗೆ ಮಾತಾಡತೊಡಗಿದ. ಅವನು ತುಂಬಾ ಬುದ್ಧಿವಂತಿಕೆಯಿಂದಲೇ ಮಾತಾಡಿದ. ಇದರಿಂದ ಅವನು ತುಂಬಾ ವಿದ್ಯಾವಂತನೆಂಬುದು ಸ್ಪಷ್ಟವಾಗಿ ಗೊತ್ತಾಗುತ್ತಿತ್ತು.

ಅಷ್ಟೊತ್ತಿಗೆ ನಾವು ವೇಯ್ಟರನಿಗೆ ಇನ್ನೂ ಸ್ವಲ್ಪ ಕ್ಯಾಬೇಜ್ ಸೂಪ್ ತರುವಂತೆ ಹೇಳಿದೆವು. ನನ್ನ ಜೊತೆಗಾರ ತನ್ನ ಜೇಬಿನಿಂದ ಸಣ್ಣ ವೋಡ್ಕಾ ಬಾಟಲಿ ತೆಗೆದು ಹಂಚಿಕೊಳ್ಳೋಣವೆಂದು ಆಹ್ವಾನಿಸಿದ. ನನಗೆ ನಿಜವಾಗಿಯೂ ಗೊತ್ತಾಗಲಿಲ್ಲ, ವೋಡ್ಕಾದ ಪ್ರಭಾವವೋ ಅಥವಾ ಆ ಜನರ ಸ್ವಾಭಾವಿಕವಾದ ಹರಟೆಮಲ್ಲ ಸ್ವಭಾವವೋ ಗೊತ್ತಿಲ್ಲ, ಅವನು ಬಹಳ ಸರಾಗವಾಗಿ ಮಾತಾಡಲು ಶುರುಮಾಡಿದ. ಈಗಂತೂ ನಾನು ಕೇಳದೆಯೇ ಮುಚ್ಚುಮರೆ ಮಾಡದೇ ತನ್ನ ಬಗ್ಗೆ ಅವನು ಬಹಳಷ್ಟು ಸಂಗತಿಗಳನ್ನು ಹೇಳಿದ. ಅವನು ಶ್ರೀಮಂತ ಕುಟುಂಬದ ಹಿನ್ನೆಲೆಯುಳ್ಳವನಾಗಿದ್ದ, ಹಾಗೆ ಕಾಣುತ್ತಿದ್ದ ಕೂಡ. ವೃತ್ತಿಯಲ್ಲಿ ವಕೀಲನಾಗಿದ್ದ, ತನ್ನ ಬೇರು–ಮೂಲದ ಬಗ್ಗೆ ದೃಢವಾದ ನಂಬಿಕೆಯುಳ್ಳವನಾಗಿದ್ದ. ಅಧಿಕಾರಸ್ಥರೊಡನೆ ಅವನಿಗೆ ಕೆಲವು ತೊಂದರೆಗಳಿದ್ದರಿಂದ ಅವನು ವಿದೇಶದಲ್ಲಿರುವುದು ಅಗತ್ಯವಾಗಿತ್ತು. ಆದರೆ, ಅವನೀಗ ತನ್ನೂರಿಗೆ ಹೋಗುತ್ತಿದ್ದಾನೆ. ಅವನ ವ್ಯವಹಾರ ಅವನನ್ನು ವ್ಲಾಡಿವಾಸ್ಟಾಕ್‌ಗೇ ಕಟ್ಟಿಹಾಕಿತ್ತು. ಆದರೆ, ಒಂದು ವಾರದಲ್ಲೇ ಅವನು ಮಾಸ್ಕೋಗೆ ಹೋಗುವವನಿದ್ದ ಮತ್ತು ಆಗ ನಾನು ಮಾಸ್ಕೋಗೆ ಹೋಗಿ ಅವನನ್ನು ಭೇಟಿಯಾದರೆ ಬಹಳ ಸಂತೋಷವಾಗುತ್ತೆ ಎಂದ.

'ನಿನಗೆ ಮದುವೆ ಆಗಿದೆಯಾ?' ಅವನು ಕೇಳಿದ ನನಗೆ.

ಇದನ್ನು ತಿಳಿದುಕೊಳ್ಳುವುದರಿಂದ ಅವನಿಗೆ ಏನಾಗಬೇಕಾಗಿದೆ ಎಂದು ನನಗನಿಸಿತು, ಆದರೆ ನಾನು ಮದುವೆ ಆಗಿದೆ ಎಂದೆ. ಅವನು ಸಣ್ಣದಾಗಿ ನಿಟ್ಟುಸಿರಿಟ್ಟ.

'ನಾನು ವಿದುರ' ಎಂದ ಅವನು. 'ನನ್ನ ಹೆಂಡತಿ ಸ್ವಿಸ್, ಜಿನೀವಾದವಳು. ಬಹಳ ಸಂಸ್ಕಾರವಂತ ಹೆಂಗಸು. ಇಂಗ್ಲಿಷ್, ಜರ್ಮನ್ ಮತ್ತು ಇಟಾಲಿಯನ್ ಭಾಷೆಗಳನ್ನು ತಪ್ಪಿಲ್ಲದೇ ಚೆನ್ನಾಗಿ ಮಾತಾಡುತ್ತಿದ್ದಳು. ಅವಳ ಮಾತೃಭಾಷೆಯೇನೋ ಫ್ರೆಂಚ್ ಆಗಿತ್ತು. ವಿದೇಶೀಯಳಾಗಿ ಅವಳು ಮಾತನಾಡುವ ರಷ್ಯನ್ ಭಾಷೆ ಸಾಧಾರಣವಾಗಿ ಬೇರೆಲ್ಲರೂ ಮಾತಾಡುವುದಕ್ಕಿಂತಲೂ ಚೆನ್ನಾಗಿಯೇ ಇತ್ತು. ಉಚ್ಚಾರಣೆಯಲ್ಲಿ ತುಸು ವ್ಯತ್ಯಾಸವೂ ಕಂಡುಬರುತ್ತಿರಲಿಲ್ಲ.'

ವೇಯ್ಟರ್ ದೊಡ್ಡ ಟ್ರೇ ತುಂಬಾ ಊಟ–ತಿಂಡಿ ತೆಗೆದುಕೊಂಡು ಹೋಗುತ್ತಿದ್ದ. ಅವನನ್ನು ಕರೆದು ಕೇಳಿದ, ನನಗನ್ನಿಸಿತು–ನನಗೆ ರಷ್ಯನ್ ಸರಿಯಾಗಿ ಅರ್ಥವಾಗುತ್ತಿರಲಿಲ್ಲ–ನಮ್ಮ ಮುಂದಿನ ಊಟದ ಐಟಂಗಾಗಿ ನಾವೆಷ್ಟು ಹೊತ್ತು ಕಾಯಬೇಕು? ಎಂದು. ವೇಯ್ಟರನು ತಕ್ಷಣ ಬೇಗನೆ ತಂದುಕೊಡ್ತೀನಿ ಎಂಬಂತೆ ತ್ವರಿತವಾಗಿ ನಡೆದ, ನನ್ನ ಜೊತೆಗಾರ ನಿಟ್ಟುಸಿರಿಟ್ಟ.

'ಕ್ರಾಂತಿಯ ನಂತರದ ಈ ಕಾಲದಲ್ಲಿ ಉಪಾಹಾರಗೃಹಗಳಲ್ಲಿ ಕಾಯುತ್ತಾ ಕೂರುವುದು ಮಾತ್ರ ಅಸಹನೀಯವಾಗಿಬಿಟ್ಟಿದೆ.'

ಆತ ತನ್ನ ಇಪ್ಪತ್ತನೆಯ ಸಿಗರೇಟನ್ನು ಹೊತ್ತಿಸಿದ, ನಾನು ಕೈಗಡಿಯಾರವನ್ನು ನೋಡುತ್ತಾ, ಹೊರಡುವುದಕ್ಕಿಂತ ಮೊದಲು ಊಟವೇನಾದರೂ ಸಿಗಬಹುದೇ ಎಂದು ಕಾತರದಿಂದ ನೋಡಿದೆ.

'ನನ್ನ ಹೆಂಡತಿ ಅಸಾಮಾನ್ಯ ಹೆಂಗಸು' ಎಂದು ಹೇಳುತ್ತಾ ಆತ ತನ್ನ ಮಾತು ಮುಂದುವರಿಸಿದ.